<u>ಅಸಲು ದಾವಾ ಸಂಖ್ಯೆ</u>: **- 34/2018** ಪಿ.ಡಬ್ಲ್ಯೂ**:-2**

ದಿನಾಂಕಃ **29.05.2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- **1** ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ಆರ್ ವಕೀಲರಿಂದಃ-</u>

ನನಗೆ ಕನ್ನಡ ಓದುವುದಕ್ಕೆ , ಬರೆಯುವುದಕ್ಕೆ ಬರುತ್ತದೆ. ನನಗೆ ವಾದಿಯ ಪರಿಚಯವಿದೆ. ವಾದಿ ತರೀಕೆರೆ ತಾಲ್ಲೂಕು ಕರೆಕುಚ್ಚಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನಾನು ಭದ್ರಾವತಿಯಲ್ಲಿ ವಾಸವಿರುತ್ತೇನೆ. ಭದ್ರಾವತಿಯಿಂದ ಕರೆಕುಚ್ಚಿ ಗ್ರಾಮಕ್ಕೆ **15** ರಿಂದ **20** ಕಿ.ಮೀ ದೂರ ಇರುತ್ತದೆ. ಭದ್ರಾವತಿಯಿಂದ ದಾವಾ ಸ್ವತ್ತು ಇರುವ ಹರಳಹಳ್ಳಿ ಗ್ರಾಮಕ್ಕೆ ಸುಮಾರು **60** ಕಿ.ಮೀ ಅಂತರವಿರುತ್ತದೆ. ನನ್ನ ಪ್ರಮಾಣಪತ್ರಕ್ಕೆ ಮಾಹಿತಿಯನ್ನು ವಾದಿ ನೀಡಿರುತ್ತಾರೆ. ದಾವಾ ಸ್ವತ್ತು ವಾದಿ ಮತ್ತು **2** ಮತ್ತು **3** ನೇ ಪ್ರತಿವಾದಿಯರ ತಂದೆಯ ಆಸ್ತಿ ಎಂದು ತೋರಿಸಲು ನಾನು ವಿಲ್ ನ್ನು ನೋಡಿರುತ್ತೇನೆ. ವಾದಿಯ ತಾಯಿ ವಾದಿಗೆ ವಿಲ್ ಬರೆದುಕೊಟ್ಟಿರುತ್ತಾರೆ. ವಾದಿಗೆ ಎಷ್ಟು ಜಮೀನು ಇರುತ್ತದೆ ಎಂದರೆ ಸಾಕ್ಷಿಯು ದಾವಾ ಸ್ವತ್ತು **1** ಸರ್ವೆ ನಂ.**87/**ಪಿ ಮಾತ್ರ ಗೊತ್ತಿರುತ್ತದೆ. ವಿಲ್ ನಲ್ಲಿ ದಾವಾ ಸ್ವತ್ತು **1** ನ್ನು ವಾದಿಯುವರ ತಾಯಿ ವಾದಿಗೆ ಬರೆದುಕೊಟ್ಟಿರುತ್ತಾರೆ.ನನಗೆ ದಾವೆಯ ಬಗ್ಗೆ ಯಾಗಲೀ ಅಥವಾ ದಾವೆಯ ಸ್ವತ್ತಿನ ಬಗ್ಗೆ ಯಾಗಲೀ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. **1985** ರಿಂದ **2** ಮತ್ತು **3** ನೇ ಪ್ರತಿವಾದಿಯವರು ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಇರುತ್ತಾರೆ. **2** ಮತ್ತು **3** ನೇ ಪ್ರತಿವಾದಿಯರಿಗೆ ಅವರ ತಾಯಿ ಸತ್ತ ನಂತರ **1991-92** ರಲ್ಲಿ ಪೌತಿ ವಾರಸು ಮುಖಾಂತರ ದಾವಾ ಸ್ವತ್ತು ಬಂದಿರುತ್ತದೆ ಎಂದರೆ ಸರಿ. ನಂತರ **2** ಮತ್ತು **3** ನೇ

ಪ್ರತಿವಾದಿಯವರು **1998** ರಲ್ಲಿ **1** ನೇ ಪ್ರತಿವಾದಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಯಾವುದೇ ವಿಲ್ ಬರೆದಿಲ್ಲ ಎಂದರೆ ಸರಿಯಲ್ಲ. **1998** ರಲ್ಲಿ ಕ್ರಯಕ್ಕೆ ಪಡೆದುಕೊಂಡ ನಂತರ **1** ನೇ ಪ್ರತಿವಾದಿ ಇಂದಿನವರೆಗೂ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ . ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.